# ನಾಡು ನುಡಿಯ ಸೇವೆಗೈದ ನಾರೀಮಣಿಯರು

ಸೆಪ್ಟಂಬರ್ ೨೦೦೭ರ ಸಂಚಿಕೆಯಲ್ಲಿ ಕರ್ನಾಟಕದ ಕೀರ್ತಿಗೆ ಕಾರಣರಾದ ಐವರು ಮಹಿಳೆಯರನ್ನು ಪರಿಚಯಿಸಿದ್ದೆವು. ಈ ಲೇಖನದಲ್ಲಿ ಸಾಹಿತ್ಯ ಸಂಗೀತ ಹಾಗೂ ನೃತ್ಯ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರತಿಭೆ ತೋರಿದ ಮಹಿಳೆಯರ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಿಕಿ ಬೆಂಗಳೂರಿನವರು.

ಸರಸ್ವತಿ ವಿಜಯನಾರಸಿಂಹ

**ಈ** ಪತ್ರಿಕೆಯಲ್ಲಿ ಕನ್ನಡ ನಾಡಿನ ಮಹಿಳಾರತ್ನಗಳ ಬಗ್ಗೆ ಹಿಂದೆ ಪರಿಚಯ ನೀಡಿದ್ದೆ. ಈ ಲೇಖನದಲ್ಲಿ ನನಗೆ ತಿಳಿದು ಬಂದ ಇನ್ನೂ ಕೆಲವು ಮಹಿಳೆಯರ ಪರಿಚಯ ಮಾಡಿ ಕೊಡುತ್ತಿರುವೆ. ತಮ್ಮ ಅದ್ಭುತ ಸಾಧನೆಗಳಿಂದ ದೇಶಕ್ಕೆ, ನಾಡಿಗೆ, ಸ್ತ್ರೀಕುಲಕ್ಕೆ ಕೀರ್ತಿ ತಂದ ಇವರು ಇಂದಿನ ಯುವಪೀಳಿಗೆಗೆ ಸ್ಫೂರ್ತಿ ನೀಡಲಿ ಎಂಬುದೇ ನನ್ನ ಉದ್ದೇಶ.

**ಚಲುವಾಂಬೆ :–** ಈಕೆ ಮೈಸೂರಿನ ಅರಸರಾಗಿದ್ದ ದೊಡ್ಡ ಕೃಷ್ಣರಾಜ ಒಡೆಯರ ಪಟ್ಟಮಹಿಷಿ, ದಳವಾಯಿ ದೊಡ್ಡೇಂದ್ರನ ಮಗ ಕಳಲೆ ಕಾಂತಪ್ಪನ ಮಗಳು. ಕನ್ನಡ ಕವಯಿತ್ರಿಯಾದ ಈಕೆ 'ವರನಂದಿ ಕಲ್ಯಾಣ', 'ವೆಂಕಟಾಚಲ ಮಹಾತ್ಮೆ', 'ಅಲಮೇಲು ಮಂಗೈ ಲಾಲಿಪದ', 'ತಲಕಾವೇರಿ ಮಹಾತ್ಮೆ' ಎಂಬ ಕೃತಿಗಳನ್ನು ರಚಿಸಿದ್ದಾಳೆ.

'ವರನಂದಿ ಕಲ್ಯಾಣ' ಸಾಂಗತ್ಯದಲ್ಲಿ ರಚಿತವಾಗಿದೆ. ಇದರಲ್ಲಿ ೭ ಸಂಧಿಗಳೂ ೮೮ ಪದ್ಯಗಳೂ ಇವೆ. ತನ್ನ ಪತಿಯ ಆಣತಿಯಂತೆ ಈ ಕಾವ್ಯವನ್ನು ರಚಿಸಿರುವುದಾಗಿ ಈಕೆ ಹೇಳಿಕೊಂಡಿದ್ದಾಳೆ. ಕೃತಿಗೆ ಕರ್ತನು ಚಲುವರಾಯ, ಸನ್ಮತಿಯಿತ್ತವನು ಶ್ರೀನಿವಾಸ ಎಂದೂ ವ್ಯಕ್ತಪಡಿಸಿದ್ದಾಳೆ. ಅಚ್ಚ ಕನ್ನಡದ ಕವಯಿತ್ರಿ ತಾನೆಂದು ಹೆಮ್ಮೆಯಿಂದ ತಿಳಿಸಿದ್ದಾಳೆ. ದಿಲ್ಲಿಯ ಬಾದಶಹನ ಮಗಳಾದ ವರನಂದಿಗೂ ಮೇಲುಕೋಟೆಯ ಚಲುವರಾಯನಿಗೂ ನಡೆದ ಪ್ರೇಮವಿವಾಹವನ್ನು ತಿಳಿಗನ್ನಡದ ಇನಿಮಾತಿನಲ್ಲಿ ಶೃಂಗಾರಮಯವಾಗಿ ತಿಳಿಸಿರುವುದಾಗಿ ಆರಂಭದಲ್ಲಿ ನಿವೇದಿಸಿಕೊಂಡಿದ್ದಾಳೆ. ಸತ್ಯಭಾಮೆಯೆ ವರನಂದಿಯಾಗಿ ಹುಟ್ಟಿದಳೆಂದು ಇವಳ ಅಭಿಮತ. ಚೆನ್ನಿಗ ಚಲುವರಾಯನನ್ನು ಕಂಡು ಮನಸೋತ ವರನಂದಿ ಆತನನ್ನೇ ತನ್ನ ಪತಿಯೆಂದು ನಿಶ್ಚಯಿಸಿ ಅಂದಿನ ಮತಾಚಾರ್ಯರನ್ನು ಎದುರಿಸಿ, ಮೇಲುಕೋಟೆಗೆ ಬಂದು, ಚಲುವರಾಯನ ಪದತಲದಲ್ಲಿ ತಾನೂ ಐಕ್ಯಳಾದಳೆಂದು ಐತಿಹ್ಯವಿದೆ. ಇಲ್ಲಿನ ಸಂದರ್ಭೋಚಿತ ವರ್ಣನೆಗಳು ಸರಳ ಸುಂದರವಾಗಿವೆ. ಶೈಲಿ ಮನೋಹರವೂ, ಹೃದಯಂಗಮವೂ ಆಗಿದೆ.

ವೆಂಕಟಾಚಾಲಪತಿಯ ಪತ್ನಿ 'ಅಲಮೇಲು ಮಂಗೈ' ಎಂಬ ಲಕ್ಷ್ಮೀಸ್ತುತಿ ೩೫ ಲಾಲಿಪದಗಳಲ್ಲಿದೆ. ಅಗ್ನಿಪುರಾಣೋಕ್ತವಾದ 'ತಲಕಾವೇರಿ' ಮಹಾತ್ಮೆ ಗದ್ಯರೂಪದಲ್ಲಿದೆ.

ಕಾವ್ಯದ ರಚನೆಯ ಪ್ರಯತ್ನದಲ್ಲಿ ತೊಡಗಿ ತನ್ನ ಪ್ರತಿಭೆಯನ್ನು ಮೆರೆದು ದೊಡ್ಡ ಪಂಡಿತೆ ಎನ್ನಿಸಿಕೊಳ್ಳಲು ತಾನು ಬಯಸುವುದಿಲ್ಲವೆಂದೂ ಈಕೆ ಹೇಳಿದ್ದಾಳೆ. ಸರಳ ಸುಂದರ ಕಾವ್ಯರಚನೆಯಲ್ಲಿ ಸ್ತ್ರೀಹೃದಯವನ್ನು ಮೆರೆದಿರುವುದೇ ತನ್ನ ಅಗ್ಗಳಿಕೆಯೆಂದು ಈಕೆ ಸ್ಪಷ್ಟಪಡಿಸಿದ್ದಾಳೆ.

**ಜಟ್ಟಿ ತಾಯಮ್ಮ :–** ಈಕೆ ಭರತನಾಟ್ಯ ಪ್ರವೀಣೆ ಮತ್ತು ಸಂಗೀತ ವಿದುಷಿ, ಜಟ್ಟಿ ದಾಸಪ್ಪನವರ ಮಗಳು. ಇವಳ ಮತ್ತೊಂದು ಹೆಸರು ಲಕ್ಷ್ಮಿದೇವಮ್ಮ. ತಂದೆಯಿಂದ ತೆಲುಗಿನ ಜಾವಳಿ ಮತ್ತು ಕ್ಷೇತ್ರಜ್ಞಪದಗಳನ್ನು ಹಾಡುವುದನ್ನು ಕಲಿತಿದ್ದಳು. ಈಕೆಯ ನಾಟ್ಯಾಭಿರುಚಿಯನ್ನು ಪ್ರೋತ್ಸಾಹಿಸಿದ ಇವರ ತಂದೆ ಆಗ ಸುಪ್ರಸಿದ್ಧರಾಗಿದ್ದ ಸುಬ್ಬರಾಯಪ್ಪನವರಿಂದ ಭರತನಾಟ್ಯ ಶಿಕ್ಷಣ ಕೊಡಿಸಿದರು. ಕವಿತಿಲಕ ಬಸವಪ್ಪಶಾಸ್ತ್ರಿಗಳಿಂದ ಕನ್ನಡ ಮತ್ತು ಸಂಸ್ಕೃತ ಭಾಷೆಯ ಕ್ರಮಶಿಕ್ಷಣ ದೊರೆಯಿತು. ನವರಸಭಾವಗಳ ಪ್ರದರ್ಶನಕ್ಕೆ ಬೇಕಾದ ಸಾಹಿತ್ಯ ಪದಗಳನ್ನು ಕಲಿತಳು. ಹದಿನೈದನೆಯ ವಯಸ್ಸಿಗೆ ನಾಟ್ಯದಲ್ಲಿ ಅಪಾರ ಪಾಂಡಿತ್ಯ ಪಡೆದು, ವಿದ್ವಾಂಸರ ಮೆಚ್ಚುಗೆಗೆ ಪಾತ್ರಳಾದಳು. ಆಗಿನ ಮಹಾರಾಜರಾದ ಚಾಮರಾಜ ಒಡೆಯರ ವಿಶೇಷ ಆಹ್ವಾನದ ಮೇರೆಗೆ ವಿಶೇಷ ದಿನಗಳಲ್ಲಿ ಅರಮನೆಯ ರಾಜಸಭೆಯಲ್ಲಿ ನಾಟ್ಯವಾಡುತ್ತಿದ್ದಳು. ಈಕೆ ಭೈರವಿರಾಗದ ಅಧಿದೇವತೆಯನ್ನು ಒಲಿಸಿಕೊಂಡಿದ್ದಳೆಂದೂ ಪ್ರತೀತಿ. ೧೯೩೫ರಲ್ಲಿ ಐರ್ಲೆಂಡಿನಿಂದ ಬಂದ ಕೆಲವು ಮಹಿಳೆಯರು ಮೈಸೂರಿನಲ್ಲಿಯೇ ನೆಲೆಸಿ ಈಕೆಯಿಂದ ನೃತ್ಯ ಶಿಕ್ಷಣ ಪಡೆದರೆಂಬುದಕ್ಕೆ ಆಧಾರಗಳಿವೆ. ೧೯೪೪ ರ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಈಕೆ ನೃತ್ಯ ಪ್ರದರ್ಶಿಸಿದಾಗ ವಿದ್ವಾಂಸರು ಮಾತ್ರವಲ್ಲದೆ ಆಬಾಲವೃದ್ಧರ ಮೆಚ್ಚುಗೆಗೂ ಪಾತ್ರಳಾದಳು. ರಾಮಗೋಪಾಲ್, ಉದಯಶಂಕರ್, ಎಸ್.ಎನ್. ಸ್ವಾಮಿ ಮತ್ತು ಸಂದರಮ್ಮ ಮೊದಲಾದ ನೃತ್ಯ ಪ್ರವೀಣರು ಈಕೆಯ ಶಿಷ್ಯರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನಡೆದ ಈಕೆಯ ನೃತ್ಯಪ್ರದರ್ಶನವನ್ನು ಮೆಚ್ಚಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ಈಕೆಗೆ 'ನಾಟ್ಯಸರಸ್ವತಿ' ಎಂಬ ಬಿರುದನ್ನಿತ್ತು

ಗೌರವಿಸಿದರು. ಸಂಸ್ಕೃತ ಭಾಷೆಯಲ್ಲಿ ಅತ್ಯುತ್ತಮ ಪರಿಣತಿ ಪಡೆದಿದ್ದ ತಾಯಮ್ಮ, ಕಾಳಿದಾಸನ ಕೃತಿಗಳ ಆಧಾರದಿಂದ ಗೀತರೂಪಕಗಳನ್ನು ಸ್ವತಃ ರಚಿಸಿ ಅಭಿನಯಿಸುತ್ತಿದ್ದರು. ಶ್ರೀಕೃಷ್ಣಕರ್ಣಾಮೃತ, ಗೀತಗೋವಿಂದ ಕಾವ್ಯಗಳ ಗೀತರೂಪಕಗಳನ್ನು ಸಿದ್ಧಪಡಿಸಿ ಅಭಿನಯಿಸಿ ಜನರನ್ನು ರಂಜಿಸಿದ್ದರು. ಮೈಸೂರು ವಾಸುದೇವಾಚಾರ್ಯರು ತಾಯಮ್ಮನಿಗೆ ರಾಗಮಾಲಿಕೆಯಲ್ಲಿ ಶ್ರೀವಾಮನ ಸ್ತೋತ್ರವನ್ನು ರಚಿಸಿಕೊಟ್ಟಿದ್ದರು. ಈ ರಾಗ ಮಾಲಿಕೆಯ ಅಭಿನಯದಲ್ಲಿ ತಾಯಮ್ಮ ತನ್ಮಯಳಾಗುತ್ತಿದ್ದಳು. ಈಕೆಯ ಕೀರ್ತಿ ಭಾರತದಾದ್ಯಂತವಲ್ಲದೆ ವಿದೇಶದಲ್ಲೂ ಹಬ್ಬಿತ್ತು. ಈಕೆಯ ನಾಟ್ಯಕೌಶಲದ ಭಾವ ಚಿತ್ರಗಳು ನಾಟ್ಯ ಮಂದಿರಗಳಲ್ಲಿ ಎಲ್ಲೆಲ್ಲೂ ವಿರಾಜಿಸುತ್ತಿದ್ದವು. ಮೈಸೂರು ನಾಟ್ಯ ಸಂಪ್ರದಾಯದ ಹಿರಿಮೆಯನ್ನು ಜಗತ್ತಿಗೆ ತೋರಿಸಿದ ಈ ನಾಟ್ಯತಾರೆ ಸುಸಂಸ್ಕೃತೆ, ಬಹುಭಾಷಾ ಕೋವಿದೆ. ಈಕೆ ೧೯೪೭ ರಲ್ಲಿ ದಿವಂಗತರಾದರು.

**ನಾಗರತ್ನಮ್ಮ:**– ನಂಜನಗೂಡಿನವರಾದ ಈಕೆ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದು ನೆಲೆಸಿದರು. ಸಂಗೀತ ಮತ್ತು ಸಾಹಿತ್ಯದಲ್ಲಿ ಹೆಸರು ಗಳಿಸಿದ್ದ ತಮ್ಮಯ್ಯನವರಲ್ಲೂ ಬಿಡಾರಂ ಕೃಷ್ಣಪ್ಪನವರಲ್ಲೂ ಉನ್ನತ ಶಿಕ್ಷಣ ಪಡೆದರು. ವೀಣೆ ಶೇಷಣ್ಣನವರ ಶಿಷ್ಯೆಯಾಗಿ ಉತ್ತಮ ವೈಣಿಕ ವಿದುಷಿಯಾದರು. ಬೆಂಗಳೂರಿಗೆ ಬಂದು ತಮ್ಮ ಸೋದರ ವೆಂಕಟಸ್ವಾಮಪ್ಪನವರಲ್ಲೂ, ಬೆಂಗಳೂರು ಕಿಟ್ಟಣ್ಣನವರಲ್ಲೂ ನೃತ್ಯಾಭ್ಯಾಸ ಮಾಡಿದರು. ಅನಂತರ ಮದರಾಸಿನ ತಿರುವೆಂಕಟಾಚಾರ್ಯರಲ್ಲಿ ನೃತ್ಯಾಭ್ಯಾಸ ಮುಂದುವರಿಸಿ, ಪ್ರೌಢಿಮೆ ಗಳಿಸಿ, ಹಲವಾರು ಪ್ರದರ್ಶನಗಳನ್ನು ನೀಡಿದರು ಹಾಗೂ ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟರು. ಕೀರ್ತಿ ತಾನೇತಾನಾಗಿ ಈಕೆಯನ್ನರಸಿಕೊಂಡು ಬಂದಿತು. ಸಂಗೀತದಲ್ಲಿ ರಾಗಾಲಾಪನೆಗೆ ಪ್ರಾಮುಖ್ಯತೆ ನೀಡುತ್ತಿದ್ದರು. ಯದುಕುಲಕಾಂಭೋಜಿ ರಾಗವೆಂದರೆ ಈಕೆಗೆ ಬಹಳ ಪ್ರೀತಿ. ದೇವರ ನಾಮಗಳು, ಶ್ಲೋಕಗಳು ಮತ್ತು ರಾಗಮಾಲಿಕೆಗಳನ್ನು ಹಾಡುವುದರಲ್ಲಿಯೂ ಈಕೆ ಅಗ್ರಗಣ್ಯೆ. ಈಕೆಗೆ ತ್ಯಾಗರಾಜರೆಂದರೆ ಪರಮಭಕ್ತಿ. ತಿರುವಯ್ಯಾರಿನಲ್ಲಿ ನೆಲೆಸಬೇಕೆಂಬುದು ಈಕೆಯ ಹಂಬಲ. ಕೊನೆಯ ದಿನಗಳನ್ನು ಅಲ್ಲಿಯೇ ಕಳೆಯುವ ಉತ್ಕಟೇಚ್ಛೆಯಿಂದ ಮದರಾಸಿನಲ್ಲಿದ್ದ ತಮ್ಮ ಮನೆಯನ್ನು ಮಾರಿದರು. ತ್ಯಾಗರಾಜರ ಸಮಾಧಿಯ ಬಳಿ ಶ್ರೀಸೀತಾರಾಮ ದೇವಾಲಯವನ್ನು ಕಟ್ಟಿಸಿದರು. ಸೀತಾರಾಮರ ವಿಗ್ರಹವನ್ನು ಕಂಡು ಭಾವಪರವಶರಾದರು. ತಮ್ಮ ಆಸ್ತಿಯನ್ನೆಲ್ಲ ಮಾರಿ ದೇವಸ್ಥಾನ ಕಟ್ಟಿಸಿದ್ದರೂ ಅವರಿಗೆ ತೃಪ್ತಿಯಾಗಲಿಲ್ಲ. ಮೈಸೂರಿನ ಹೆಸರಲ್ಲಿ ಅಲ್ಲೊಂದು ಛತ್ರವನ್ನೂ ಕಟ್ಟಿಸಿದರು. ಸಂಗೀತ ಶಿಕ್ಷಣದಲ್ಲಿ ಪರಿಣತಿ ಪಡೆಯಲು ಬರುವವರಿಗಾಗಿ ಸಂಗೀತ ಪಾಠ ಶಾಲೆಯನ್ನು ಕಟ್ಟಿಸಿದರು. ಅಲ್ಲಿಯ ಕಾರ್ಯನಿರ್ವಹಣೆಗಾಗಿ ಸಂಗೀತ ತಜ್ಞರನ್ನು ನಿಯೋಜಿಸುತ್ತಿದ್ದಾಗಲೇ ನಾಗರತ್ನಮ್ಮ ತಿರುವಯ್ಯಾರಿನಲ್ಲಿ ಕಾಲವಾದರು. ಆಕೆಯ ಅಪೇಕ್ಷೆಯಂತೆ ಮೈಸೂರಿನ ಹಲವಾರು ವಿದ್ವಾಂಸರು ಅಲ್ಲಿಗೆ ಕಷ್ಟಪಟ್ಟು ಹೋಗಿ ಅಲ್ಲಿಯೇ ನೆಲೆಸಿ, ನಂತರ ಮೈಸೂರಿಗೆ ಮರಳಿದರು.

**ಆರ್. ಕಲ್ಯಾಣಮ್ಮ :**– ಈಕೆ ಬೆಂಗಳೂರಿನಲ್ಲಿ ಜನಿಸಿದರು. ತಂದೆ ಶ್ರೀ ರಾಮಸ್ವಾಮಿ ಅಯ್ಯಂಗಾರ್ ಹಾಗೂ ತಾಯಿ ಜಾನಕಮ್ಮ. ಆಗಿನ ಸಂಪ್ರದಾಯದಂತೆ ಈಕೆಗೆ ಹತ್ತು ವರ್ಷವಾಗಿದ್ದಾಗಲೇ ವಿವಾಹವಾಗಿದ್ದು, ಯಾವುದೋ ಆಕಸ್ಮಿಕದಲ್ಲಿ ಈಕೆಯ ಪತಿ ಮೂರೇ ತಿಂಗಳಲ್ಲಿ ತೀರಿಕೊಂಡಿದ್ದರು. ತಂದೆ ಮಗಳನ್ನು ಕಣ್ಣೀರಲ್ಲಿ ಕೈತೊಳೆಯಲು ಬಿಡಲಿಲ್ಲ. ಆಕೆಯ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಉನ್ನತ ಶಿಕ್ಷಣ ಪಡೆದು ಆಕೆಯು ತಂದೆಯ ಪ್ರಭಾವದಿಂದ ಕನ್ನಡ ಸಾಹಿತ್ಯದಲ್ಲಿ ಒಳ್ಳೆಯ ಅಭಿರುಚಿ ಬೆಳೆಸಿಕೊಂಡರು.

ಒದಗಿ ಬಂದ ದುರ್ದೈವಕ್ಕೆ ಅಳುಕದೆ ಸಮಾಜ ಕಾರ್ಯಗಳಲ್ಲಿ ತಮ್ಮನ್ನು ಬಿಡುವಿಲ್ಲದೆ ತೊಡಗಿಸಿಕೊಂಡರು. ನೆರೆಹೊರೆಯ ದುಃಖತಪ್ತ ಮಹಿಳೆಯರ ಕಣ್ಣೀರೊರೆಸುವ ಕಾರ್ಯಕ್ಕೆ ಮನಗೊಡಲಾರಂಭಿಸಿದರು. ತಮ್ಮ ಪರಿಸರದಲ್ಲಿ ಆಕೆ ಜನಾನುರಾಗಿಯಾದಳು. ಎಲ್ಲರಿಗೂ ಬೇಕಾದ 'ಅಕ್ಕ'ನಾಗಿ, 'ಅತ್ತೆ'ಯಾಗಿ, ಚಿಕ್ಕಪುಟ್ಟ ಮಕ್ಕಳ 'ಅಮ್ಮ'ನಾಗಿ, ವಾತ್ಸಲ್ಯಮಯಿಯಾದರು.

'ಸರಸ್ವತಿ' ಎಂಬ ಮಾಸಪತ್ರಿಕೆಯನ್ನು ಈಕೆ ಪ್ರಾರಂಭಿಸಿದರು. ಅತ್ಯುತ್ತಮ ಕಥೆ, ಕಾದಂಬರಿಗಳನ್ನು ತಾವೂ ಬರೆದು ಪ್ರಕಟಿಸುತ್ತಿದ್ದರಲ್ಲದೆ ಕರ್ನಾಟಕದ ಉತ್ತಮ ಲೇಖಕರಿಗೂ ಇದರಲ್ಲಿ ಅವಕಾಶ ಕೊಡುತ್ತಿದ್ದರು. 'ಸರಸ್ವತಿ' ಮಾಸಪತ್ರಿಕೆ ಕರ್ನಾಟಕದಾದ್ಯಂತ ಹೆಸರು ಮಾಡಿದ ಪತ್ರಿಕೆಯಾಗಿ ಬೆಳೆಯತೊಡಗಿತು. ಪ್ರಿಯಂವದ, ನಿರ್ಭಾಗ್ಯ ವನಿತೆ, ಸುಖಲತ, ಭಕ್ತೆ ಮೀರ, ಸತಿ ಪದ್ಮಿನಿ, ರಣಕೇಸರಿ ಮತ್ತು ಮಾಧವಿ ಎಂಬ ಕಾದಂಬರಿಗಳಲ್ಲದೆ ಹಲವಾರು ನಾಟಕಗಳನ್ನೂ ಬರೆದು ತಮ್ಮ ಪತ್ರಿಕೆಯಲ್ಲಿ ಪ್ರಚುರ ಪಡಿಸಿದರು. ಇವರು ರಚಿಸಿದ 'ದರಿದ್ರ ನಾರಾಯಣ' ಮತ್ತು 'ವರದಕ್ಷಿಣೆ' ನಾಟಕಗಳು ಅನೇಕ ಪ್ರದರ್ಶನಗಳನ್ನು ಕಂಡಿವೆ. ಕಿರಿಯರ ಏಳಿಗೆಗಾಗಿ 'ಮಕ್ಕಳ ಕೂಟ'ವನ್ನು ಸ್ಥಾಪಿಸಿದರು. ಇವರು ರಚಿಸಿದ ಕೃತಿಗಳೂ ಹಲವಾರು. ಮೈಸೂರು ಮಹಾರಾಜರು ಈಕೆಯ ಸಮಾಜ ಸೇವೆಯನ್ನು ಗುರುತಿಸಿ, ಈಕೆಗೆ 'ಸಾರ್ವಜನಿಕ ಸೇವಾಪದಕ'ವಿತ್ತು ಸನ್ಮಾನಿಸಿದರು. 'ಸರಸ್ವತಿ' ಪತ್ರಿಕೆಯ ರಜತೋತ್ಸವ ಸಮಾರಂಭದಲ್ಲಿ ಈಕೆಗೆ ಒಂದು ನಿಧಿಯನ್ನು ಸಮರ್ಪಿಸಲಾಯಿತು. ೧೯೩೮ ರಲ್ಲಿ ಈಕೆ ಬೆಂಗಳೂರು ನಗರಸಭೆಯ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದರು. ನಗರಸಭೆಯ ಪ್ರಥಮ ಮಹಿಳಾ ಸದಸ್ಯರೂ ಆಗಿದ್ದರು. ತಮ್ಮ ೭೧ ನೆಯ ವಯಸ್ಸಿನಲ್ಲಿ ಈಕೆ ನಿಧನರಾದರು. ಈಕೆಯ

ಜ್ಞಾಪಕಾರ್ಥ ಅಖಿಲ ಕರ್ನಾಟಕ ಮಕ್ಕಳಕೂಟ ಒಂದು ಸ್ಮಾರಕ ನಿಧಿಯನ್ನೂ ಸ್ಥಾಪಿಸಿದೆ. ಈಕೆಯ ಹೆಸರಿನಲ್ಲಿ ವರ್ಷಂಪ್ರತಿ ಬುದ್ಧಿವಂತ ಮಕ್ಕಳಿಗೆ ಒಂದು 'ಗೌರವನಿಧಿ'ಯನ್ನು ಸಮರ್ಪಿಸಲಾಗುತ್ತಿದೆ.

**ಕಮಲಾದೇವಿ ಚಟ್ಟೋಪಾಧ್ಯಾಯ :** ಈಕೆಯೂ ಸಾಮಾಜಿಕ ಕಾರ್ಯಕರ್ತೆ, ಕಲಾವಿದೆ ಹಾಗೂ ಸ್ವಾತಂತ್ರ್ಯ ಹೋರಾಟಗಾರ್ತಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಕೆಯ ಜನನ. ತಂದೆ ಮದರಾಸು ಸಿವಿಲ್ ಸರ್ವಿಸಿನಲ್ಲಿ ಉನ್ನತ ದರ್ಜೆಯ ಅಧಿಕಾರಿಯಾಗಿದ್ದರು. ಈಕೆಗೆ ಬಾಲ್ಯದಲ್ಲೇ ವಿವಾಹವಾಗಿತ್ತು. ಶಾಲಾ ವಿದ್ಯಾರ್ಥಿನಿಯಾಗಿದ್ದಾಗಲೇ ಈಕೆಗೆ ವೈಧವ್ಯ ಬಂದಿತು.

ತಂದೆ ಮಗಳನ್ನು ಹಳೆಯ ಕಂದಾಚಾರಗಳಿಗೆ ಬಲಿಗೊಡಲಿಲ್ಲ. ಆಕೆಯನ್ನು ಉನ್ನತ ವಿದ್ಯಾಭ್ಯಾಸಕ್ಕಾಗಿ ಕಾಲೇಜಿನ ವ್ಯಾಸಂಗಕ್ಕೂ ಕಳಿಸಿದರು. ಕ್ಯಾಥೋಲಿಕ್ ಕಾನ್ವೆಂಟ್ ಮತ್ತು ಸೆಂಟ್ ಮೇರಿಸ್ ಕಾಲೇಜಿನಲ್ಲಿ ಕಮಲಾದೇವಿ ವ್ಯಾಸಂಗ ಮಾಡಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೂ ತೆರಳಿದು. ತಂದೆಯ ಅಪ್ಪಣೆ ಪಡೆದು ತಾನು ಒಪ್ಪಿದ ಹರೀಂದ್ರನಾಥ ಚಟ್ಟೋಪಾಧ್ಯಾಯ ಎಂಬುವವರನ್ನು ಮದುವೆಯಾದರು. ಪತಿಯೊಂದಿಗೆ ವಿದೇಶಗಳಲ್ಲಿ ಸಂಚರಿಸಿ, ಕಲಾವಿದರನ್ನು ಸಂದರ್ಶಿಸುತ್ತ, ರಂಗಭೂಮಿಯ ಅಧ್ಯಯನವನ್ನು ಮಾಡಿ ಪ್ರಯೋಗತಂತ್ರ ಕಲಿತರು. ಕಲಾತ್ಮಕ ನಾಟಕಗಳನ್ನು ರಂಗಭೂಮಿಯ ಮೇಲೆ ತರಲು ಪತಿಯೊಂದಿಗೆ ಶ್ರಮಿಸಿದರು.

ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ನಾಯಕರು ಕಮಲಾದೇವಿಯ ಮೇಲೆ ವಿಶೇಷ ಪ್ರಭಾವ ಬೀರಿದರು. ಅಸಹಕಾರ ಚಳುವಳಿಯಲ್ಲಿ ಧುಮುಕಿದ ಈಕೆ, ಕೃಷಿಕರ ಸಮಸ್ಯೆಯ ಪರಿಹಾರದಿಂದಲೇ ದೇಶದ ಉದ್ಧಾರವೆಂದು ನಂಬಿ ಕೃಷಿ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ತಳೆದರು. ಅಂಗವಿಕಲರ ಏಳ್ಗೆಗಾಗಿಯೂ ಈಕೆ ಅನೇಕ ಕಾರ್ಯಕ್ರಮಗಳನ್ನು ನಡೆಸಿದರು.

ಉತ್ತಮ ಮಾನವ ಸಂಬಂಧಗಳು ಹಾಗೂ ಕ್ರಿಯಾಶೀಲ ಕಳಕಳಿಯೇ ಸಮಾಜವಾದದ ಸತ್ವವೆಂಬುದು ಇವರ ನಂಬಿಕೆ. ಕಾರ್ಮಿಕರ ಹಿತರಕ್ಷಣೆಗಾಗಿ ಸಂಸ್ಥೆಗಳನ್ನು ಹಾಗೂ ಸಂಘಟನೆಗಳನ್ನು ಒಗ್ಗೂಡಿಸಿ ಚಳುವಳಿಗೆ ನಾಯಕತ್ವ ನೀಡಿ ಉತ್ತೇಜಿಸಿದರು. ಅಖಿಲ ಭಾರತ ಮಹಿಳಾ ಸಮ್ಮೇಳನವನ್ನು ನಡೆಸಿದ ಕೀರ್ತಿ ಕಮಲಾದೇವಿಯವರಿಗೆ ಸಲ್ಲುತ್ತದೆ.

ಹಲವಾರು ಅಧಿಕಾರಗಳಲ್ಲಿದ್ದ **ಕಮಲಾದೇವಿ**ಯವರು ಆ ಹುದ್ದೆಗಳಿಗೆ ಕೀರ್ತಿ, ಪ್ರತಿಷ್ಠೆಗಳನ್ನು ತಂದುಕೊಟ್ಟರು. ಈಕೆ ಇಂಗ್ಲಿಷಿನಲ್ಲಿ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. 'ಭಾರತೀಯ ಮಹಿಳಾ ಜಾಗೃತಿ', 'ರಾಷ್ಟ್ರೀಯ ರಂಗಭೂಮಿ', 'ಕರಕುಶಲ ಕೈಗಾರಿಕೆಗಳು' ಮುಂತಾದವು ಅವರ ಕೆಲವು ಕೃತಿಗಳು. ಹಲವಾರು ಕ್ಷೇತ್ರಗಳಲ್ಲಿ ದುಡಿದಿದ್ದ ಇವರಿಗೆ ವೈವಿಧ್ಯಪೂರ್ಣ ಆಸಕ್ತಿಗಳಿದ್ದುವು. ೧೯೫೫ ರಲ್ಲಿ ಇವರಿಗೆ 'ಪದ್ಮಭೂಷಣ' ಪ್ರಶಸ್ತಿ ದೊರಕಿತು. ಸಾಮಾಜಿಕ ಮುಂದಾಳುತ್ವಕ್ಕಾಗಿ ಇವರಿಗೆ ವಾಟ್‌ಮಲ್ ಪುರಸ್ಕಾರ ಮತ್ತು 'ಮಾಗ್ಸಸೇ' ಪ್ರಶಸ್ತಿಗಳು ಸಂದಿವೆ. ೧೯೭೦ ರಲ್ಲಿ ಶಾಂತಿನಿಕೇತನದ ವಿಶ್ವವಿದ್ಯಾಲಯದಿಂದ ಈಕೆಗೆ 'ದೇಶಿಕೋತ್ತಮ' ಎಂಬ ಪ್ರಶಸ್ತಿಯೂ ದೊರಕಿತು. ಇಂಥ ಅದ್ಭುತ ಪ್ರತಿಭೆಯ ಈಕೆ ಕನ್ನಡಿತಿ ಎಂಬುದು ನಮಗೆಲ್ಲಾ ಹೆಮ್ಮೆಯ ವಿಷಯ.

**ಕೊಡಗಿನ ಗೌರಮ್ಮ:** ಮಡಿಕೇರಿಯಲ್ಲಿ ಜನಿಸಿದ ಈಕೆ ಕನ್ನಡಕ್ಕಾಗಿ ದುಡಿದಿದ್ದಾಳೆ. ಹವ್ಯಕ ವಂಶದಲ್ಲಿ ಜನಿಸಿದ ಈಕೆಯ ತಂದೆ ರಾಮಯ್ಯ, ತಾಯಿ ನಂಜಕ್ಕ. ಮಡಿಕೇರಿಯಲ್ಲಿ ವಿದ್ಯಾಭ್ಯಾಸ ಮಾಡಿ, ಗೋಪಾಲಕೃಷ್ಣ ಎಂಬುವವರೊಂದಿಗೆ ವಿವಾಹವೂ ಆಯಿತು. ಬಿಡುವಿನ ವೇಳೆಯಲ್ಲಿ ಪುಸ್ತಕಗಳ ಅಧ್ಯಯನ ನಡೆಸಿ ಈಕೆ ಬರೆಯಲಾರಂಭಿಸಿದಳು. ಸದ್ಗೃಹಿಣಿಯಾಗಿದ್ದು ಸಮಯದ ಸದ್ವಿನಿಯೋಗ ಮಾಡಿಕೊಂಡರು. ಅತ್ಯುತ್ತಮ ಕಥೆಗಳನ್ನು ಬರೆಯಲಾರಂಭಿಸಿದರು. ಈಕೆಯ 'ಮನುವಿನ ರಾಣಿ' ಉತ್ತಮ ಕತೆಯಾಗಿ ಹೆಸರು ತಂದಿತು. ಈಕೆಯ ಕತೆಗಳಲ್ಲಿ ಸಹಾನುಭೂತಿ, ಮೃದುಮಧುರ ಭಾವನೆಗಳನ್ನು ಕಾಣುತ್ತೇವೆ. ಸರಳವಾದ ಭಾಷೆಯಿಂದ ಈಕೆ ಜನಪ್ರಿಯಳಾದಳು. ಈಕೆಯ ಅನೇಕ ಕತೆಗಳನ್ನು ಸಂಗ್ರಹಿಸಿ 'ಚಿಗುರು' ಎಂಬ ಹೆಸರಿನಲ್ಲಿ ಪ್ರಕಟಿಸಲು ಪ್ರಕಾಶಕರು ಮುಂದೆ ಬಂದರು. ಈ ಸಮಯದಲ್ಲಿ ಎಂದಿನಂತೆ ಈಜಲು ಹೋಗಿದ್ದ ಗೌರಮ್ಮ ಆಕಸ್ಮಿಕವಾಗಿ ಮುಳುಗಿ ತೀರಿಕೊಂಡರು. ಪ್ರಕಾಶಕರು 'ಚಿಗುರು' ಕಥಾಸಂಗ್ರಹಕ್ಕೆ 'ಕಂಬನಿ' ಎಂದು ಹೆಸರಿಟ್ಟು ಪ್ರಕಟಿಸಿದರು. ಸಣ್ಣ ಕತೆಗಳಲ್ಲಿ ಈಕೆಯ ಹೆಸರು ಅಗ್ರಸ್ಥಾನದಲ್ಲಿದೆ.

ವಿಜಯನಗರದ ಅರಸರ ಕಾಲದಿಂದಲೂ ಬರೆಯುವ ದಿವ್ಯ ಚೈತನ್ಯವಿದ್ದ ಹಲವಾರು ಮಹಿಳಾ ವಾಣಿಗಳನ್ನು ಕಾಣುತ್ತೇವೆ. ಗಂಗಾದೇವಿ ಎಂಬಾಕೆ ಆ ಕಾಲದ ಹೆಸರಾಂತ ಲೇಖಕಿ, ಸಂಸ್ಕೃತ ಭಾಷೆಯಲ್ಲೂ ಪ್ರೌಢಿಮೆ ಮೆರೆದ ಕವಯಿತ್ರಿ, ಈಕೆ ಬುಕ್ಕರಾಯನ ಸೊಸೆ. ಈಕೆ ಕನ್ನಡದಲ್ಲಿಯೂ ಒಳ್ಳೆಯ ಅಭಿರುಚಿ ಹೊಂದಿದ್ದಳೆಂದು ಮಾತ್ರ ತಿಳಿದುಬರುತ್ತದೆ. ಅದಕ್ಕೆ ಯಾವ ಆಧಾರಗಳೂ ಕಾಣಸಿಗುವುದಿಲ್ಲ. ಅನೇಕಾನೇಕ ವಿದ್ವನ್ಮಣಿಗಳು ಕನ್ನಡ ಭಾಷೆಯ ಏಳಿಗೆಗಾಗಿ ದುಡಿದಿರುವುದನ್ನು ನಾವು ಉದಾಹರಿಸಬಹುದು. ಸಾಹಿತ್ಯ, ನಾಟ್ಯ, ಸಂಗೀತಗಳಲ್ಲಿ ಪ್ರೌಢಿಮೆ ಆಯಾ ಪ್ರಾಂತ್ಯದ ಸಂಸ್ಕೃತಿಯ ಸಮೃದ್ಧಿಯನ್ನು ಪ್ರತಿಬಿಂಬಿಸುತ್ತದೆ. ಈ ದೃಷ್ಟಿಯಿಂದ **ಕನ್ನಡ ನಾಡು ಚೆಲುವ ನಾಡು, ಶ್ರೀಮಂತ ನಾಡು, ಕಲೆಯ ಬೀಡು**.